ಇಂದು ದಿ:25.07.2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿ ಕೆ ಎಂ ವಕೀಲರಿಂದ ಃ

ಮಿಳಿಂದ ವಿದ್ಯಾ ಸಂಸ್ಥೆ ಟ್ರಸ್ಟ್ ಡೀಡಿನ ಅಡಿಯಲ್ಲಿ ಸ್ಥಾಪಿತವಾದ ಸಂಸ್ಥೆ. ಟಸ್ಟ್ ಡೀಡನ್ನು ದಿಃ 23-04-1986 ರಲ್ಲಿ ಬರೆಯಲಾಗಿತ್ತು. ಟಸ್ಟ್ ಡೀಡ್ ನೋಂದಾಗಿರುತ್ತದೆ. ಮಿಳಿಂದ ವಿದ್ಯಾ ಸಂಸ್ಥೆಯ ಸ್ಥಾಪನೆಗೆ ಕಾರಣಾದ ಮುಖ್ಯ ವ್ಯಕ್ತಿ ನಾನೇ. ಕೆಳಸಮುದಾಯದ ಜನರಿಗೆ ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ ಸದರಿ ಸಂಸ್ಥೆಯನ್ನು ಹುಟ್ಟುಹಾಕಲಾಗಿದೆ. ಸಂಸ್ಥೆಯ ಧರ್ಮದರ್ಶಿಗಳನ್ನು ನಾನೇ ಆಯ್ಕೆ ಮಾಡಿರುತ್ತೇನೆ. ಧರ್ಮದರ್ಶಿಯಾಗಿ ಆಯ್ಕೆ ಮಾಡಲು ಆ ವ್ಯಕ್ತಿಗೆ ಉತ್ತರ ಚಾರಿತ್ರ್ಯ ಹೊಂದಿರಬೇಕು, ಉತ್ತರ ಶಿಕ್ಷಣ ನೀಡಬೇಕೆಂಬ ಬದ್ಧತೆ ಇರಬೇಕು ಮತ್ತು ಆ ವ್ಯಕ್ತಿ ಪ್ರಾಮಾಣಿಕನಾಗಿರಬೇಕು ಹಾಗೂ ವಿದ್ಯಾರ್ಹತೆ ಹೊಂದಿರಬೇಕು ಎಂದು ಇರುತ್ತದೆ. ಸಂಸ್ಥೆಯ ನೋಂದಣಿ ಕಾಲಕ್ಕೆ ಅದರ ಧಮದರ್ಶಿಗಳಾಗಿ ಆಯ್ಕೆ ಮಾಡಿದ ವ್ಯಕ್ತಿಗಳು ಮರಿಸ್ವಾಮಿ, ಟಿ.ವೈ.ಭೂತಯ್ಯ, ಡಿ.ವಿ.ದೇಸಾಯಿ, ಕೆ.ಸುಮಿತ್ರಾಬಾಯಿ, ಬಿ.ಆರ್.ಗೋಪಮ್ಮ ಮತ್ತು ಆರ್.ಎಸ್.ದೊಡ್ಡಣ್ಣ ಅಂದರೆ ಈ ಪ್ರಕರಣದ ಆರೋಪಿ.

ಸಂಸ್ಥೆ ಪ್ರಾರಂಭಿಸುವ ಕಾಲಕ್ಕೆ ನಾನು ಮೈಸೂರು ವಿಶ್ವ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದೆ. ಆ ಸಮಯಕ್ಕೆ ಆರೋಪಿ ಪ್ರೌಢಶಾಲಾ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದರು. ಅಂದಿನಿಂದ 2017 ರವರೆಗೆ ಆತ ಸರ್ಕಾರಿ ಸೇವೆಯಲ್ಲಿ ಇದ್ದರು ಎಂದರೆ ಸರಿ. ವಿದ್ಯಾ ಸಂಸ್ಥೆ ಪ್ರಾರಂಭಿಸಿದ್ದು ಯಾವುದೇ ಸರ್ಕಾರಿ ಉದ್ಯೋಗದಲ್ಲಿದ್ದ ವ್ಯಕ್ತಿಗಳು ಸೇವಾ ಮನೋಭಾವ ಹೊಂದಿದ್ದಲ್ಲಿ, ಸಂಸ್ಥೆಯ ಧರ್ಮದರ್ಶಿಗಳಾಗಬಹುದು ಎಂಬ ಉದ್ದೇಶದೊಂದಿಗೆ ಪ್ರಾರಂಭಿಸಲಾಗಿತ್ತು ಎಂದರೆ ಸರಿ. ಆರೋಪಿಯು ತನ್ನ ಸರ್ಕಾರಿ ಸೇವೆಯಲ್ಲಿ ಸಿಗುವ ಬಿಡುವಿನ ವೇಳೆಗಳಲ್ಲಿ ಸಂಸ್ಥೆಯ ಧರ್ಮದರ್ಶಿಯಾಗಿ ಸೇವೆಯನ್ನು

ಸಲ್ಲಿಸುತ್ತಿದ್ದರು ಎಂದರೆ ಅದನ್ನು ಒಪ್ಪಿಕೊಳ್ಳಲು ಆಗುವುದಿಲ್ಲಾ ಎಂದು ಹೇಳುತ್ತೇನೆ. ಆರೋಪಿಯನ್ನು ಮಿಳಿಂದ ವಿದ್ಯಾ ಸಂಸ್ಥೆಯಲ್ಲಿ ನೌಕರಿಗೆ ನೇಮಕಮಾಡಿಕೊಂಡಿರುವುದಿಲ್ಲಾ. ಆರೋಪಿಯ ವಿದ್ಯಾರ್ಹತೆ ಎಂ.ಎ, ಬಿಎಡ್ ಎಂದರೆ ಸರಿ.

ಆರೋಪಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಡಿ.ಎಡ್ ಉಪನ್ಯಾಸಕಾರಾಗಿ ಸೇವೆ ಸಲ್ಲಿಸಿ , 2017 ರಲ್ಲಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಟ್ರಸ್ಟ್ ಡೀಡ್ ಅಡಿಯಲ್ಲಿ ನನ್ನನ್ನೇ ಮ್ಯಾನೇಜಿಂಗ್ ಟ್ರಸ್ಟಿಯಾಗಿ ನೇಮಕಮಾಡಲಾಗಿತ್ತು. 2014 ರವರೆವಿಗೂ ನಾನೇ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದು, 2014 ರಿಂದ 2017 ರವರೆಗೆ ಕಾರ್ಯದರ್ಶಿಯಾಗಿದ್ದು, 2017 ರಿಂದ ಟ್ರಸ್ಟ್‌ನ ಅಧ್ಯಕ್ಷನಾಗಿದ್ದೇನೆ. ಸಂಸ್ಥೆಯ ಸಂಪೂರ್ಣ ಆಡಳಿತ ನಿರ್ವಹಣೆ ಯನ್ನು ಮ್ಯಾನೇಜಿಂಗ್ ಟ್ರಸ್ಟಿಯಾಗಿ ನೀವು ನಿರ್ವಹಿಸುತ್ತಿದ್ದರಲ್ಲವೇ ಎಂದರೆ ಸರಿಯಲ್ಲ. 2014 ರವರೆಗೂ ನಾನು ಎಂದೂ ಟ್ರಸ್ಟ್ ಡೀಡ್‌ನ ನಿಬಂಧನೆಗಳಲ್ಲಿ ವಿರುದ್ಧ ನಡೆದುಕೊಂಡ ಉದಾಹರಣೆಗಳು ಇಲ್ಲ. ವ್ಯವಸ್ಥಾಪಕ ಧರ್ಮದರ್ಶಿಯ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಟ್ರಸ್ಟ್ ಡೀಡುಗಳಲ್ಲಿ ನಮೂದಾಗಿರುತ್ತದೆ. ಸಂಸ್ಥೆಯ ಪ್ರಾರಂಭದ ದಿನಗಳಲ್ಲಿ ಸಂಸ್ಥೆಯ ಹಣಕಾಸಿನ ವ್ಯವಹಾರಕ್ಕಾಗಿ ಬ್ಯಾಂಕ್ ಖಾತೆ ಸಂಸ್ಥೆಯ ಹೆಸರಿನಲ್ಲಿದ್ದು, ಅದರ ನಿರ್ವಹಣೆಯನ್ನು ನಾನು ಮಾಡುತ್ತಿದ್ದು, 2006 ಮತ್ತು 2009 ರಲ್ಲಿ ಜಂಟಿ ಖಾತೆಯಾಗಿ ಪರಿವರ್ತನೆಗೊಂಡಿರುತ್ತದೆ.

ಬ್ಯಾಂಕ್ ಖಾತೆಯ ಹಣಕಾಸಿನ ನಿರ್ವಹಣೆ ಜವಾಬ್ದಾರಿಯನ್ನು ಸಂಸ್ಥೆಯ ಪ್ರಾರಂಭದದಿಂದ 2014 ರವರೆಗೂ ನಾನೇ ಹೊಂದಿರುತ್ತೇನೆ. ಟ್ರಸ್ಟ್ ಡೀಡ್‌ನ ಪ್ರಕಾರ ಕನಿಷ್ಟ ತಿಂಗಳಿಗೊಮ್ಮೆಯಾದರೂ ಎಲ್ಲಾ ಧರ್ಮದರ್ಶಿಗಳ ಸಭೆ ಸೇರಿಸಿ, ಅದರಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ಠರಾವುಗಳನ್ನು ಜಾರಿಗೊಳಿಸಬೇಕೆಂದು ನಿಬಂಧನೆ ಇದೆ ಎಂದರೆ ಸರಿ. ಹಣಕಾಸಿನ ನಿರ್ವಹಣೆಯನ್ನು ಬೇರೆಯವರಿಗೆ ವಹಿಸಬೇಕಾದರೂ ಧರ್ಮದರ್ಶಿಗಳ ಸಭೆಯಲ್ಲಿ ಆ ಬಗ್ಗೆ ಠರಾವು ಆಗಬೇಕು ಎಂದರೆ ಸರಿ. ಅದರಂತೆ ಆಡಳಿತಾತ್ಮಕ ಜವಾಬ್ದಾರಿಗಳನ್ನು ಬೇರೊಬ್ಬರಿಗೆ ವಹಿಸಬೇಕಾದರೂ, ಧರ್ಮದರ್ಶಿಗಳ

ಸಭೆಯಲ್ಲಿ ಠರಾವು ಆಗಬೇಕು ಎಂದರೆ ಸರಿ. ಆರೋಪಿಗೆ ಹಣಕಾಸಿನ ಜವಾಬ್ದಾರಿ ನೀಡಿರುವ ಬಗ್ಗೆ ಧರ್ಮದರ್ಶಿಗಳ ಸಭೆಯಲ್ಲಿ ಯಾವುದೇ ಠರಾವು ಆಗಿರುವುದಿಲ್ಲಾ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಜವಾಬ್ದಾರಿ ನೀಡಿರುತ್ತೇವೆ ಎಂದು ಹೇಳುತ್ತಾರೆ. ಮೌಖಿಕವಾಗಿ ಜವಾಬ್ದಾರಿ ವಹಿಸಬಹುದು ಎಂಬುದರ ಬಗ್ಗೆ ಟ್ರಸ್ಟ್ ಡೀಡಿನಲ್ಲಿ ಯಾವುದೇ ನಿಬಂಧನೆ ಇರುವುದಿಲ್ಲ.

ಮ್ಯಾನೇಜಿಂಗ್ ಟ್ರಸ್ಟಿಯಾಗಿ ನನ್ನನ್ನು ಹೊರತುಪಡಿಸಿ, ಉಳಿದ ಎಲ್ಲಾ ಧರ್ಮದರ್ಶಿಗಳಿಗೆ ಸಮಾನಕರವಾದಂತಹ ಜವಾಬ್ದಾರಿಗಳನ್ನು ಟ್ರಸ್ಟ್ ಡೀಡಿನಲ್ಲಿ ಕಾಣಿಸಲಾಗಿದೆ ಎಂದರೆ ಸರಿ. ಸಾಕ್ಷಿಗೆ ಒಂದು ನೊಂದಾಯಿತ ದಾಖಲಾತಿಯ ದೃಡೀಕೃತ ನಕಲನ್ನು ತೋರಿಸಿ ಮಿಳಿಂದ ವಿದ್ಯಾಸಂಸ್ಥೆಯ ಟ್ರಸ್ಟ್ ಡೀಡ್ ಅದೇ ಇರುತ್ತದೆ ಎಂದರೆ ಹೌದು ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸುಮಿತ್ರಾಬಾಯಿ ಇವರು ದೇವನೂರು ಮಹದೇವ ರವರ ಧರ್ಮಪತ್ನಿ ಎಂದರೆ ಸರಿ. ಮಿಳಿಂದ ವಿದ್ಯಾಸಂಸ್ಥೆಯ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಮತ್ತು ನೇಮಕಾತಿ ಆದೇಶ ನೀಡುವ ಅಧಿಕಾರ ನಿಡಿ-1ರ ಪ್ರಕಾರ ನನಗೆ ಇದೆ ಎಂದರೆ ಸರಿ.

ಸುರೇಶ್‌ಕುಮಾರ್, ಜಲಜಾಕ್ಷಿ, ಸುಲೋಚನಾ, ಗೀತಾ ಮತ್ತು ಹೇಮಾವತಿ ಈ ಶಿಕ್ಷಕರನ್ನು ನಾನು ಸಂಸ್ಥೆಗೆ ನೇಮಕ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿ ಅವರನ್ನು ನೇಮಕ ಮಾಡಿದ್ದು, ಅದನ್ನು ನಾನು ಅನುಮೋದಿಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ವ್ಯಕ್ತಿಗಳನ್ನು ಶಿಕ್ಷಕರಾಗಿ ನೇಮಿಸಿಕೊಳ್ಳಲು ಆರೋಪಿಗೆ ಅಧಿಕಾರ ಕೊಟ್ಟಿರುವ ಬಗ್ಗೆ ಸಂಸ್ಥೆಯಲ್ಲಿ ಯಾವುದೇ ಠರಾವು ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ಸದರಿ ಸಂಸ್ಥೆಯ ಪಕ್ಕದಲ್ಲೇ ಇರುವ ಕೂಡಿಗೆ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದರಿಂದ ಮತ್ತು ಆತ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಆತನಿಗೆ ಮೌಖಿಕವಾಗಿ ಶಿಕ್ಷಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಅಧಿಕಾರ ನೀಡಿ, ಆತನ ನೇಮಕ

ಮಾಡಿದ್ದವರನ್ನು ಠರಾವು ಮೂಲಕ ತಾಂತ್ರಿಕವಾಗಿ ಒಪ್ಪಿಗೆ ನೀಡಲಾಗುತ್ತಿತ್ತು ಎಂದು ಹೇಳುತ್ತಾರೆ. ಈ ಸಂಗತಿಯನ್ನು ತೋರಿಸುವಂತಹ ಯಾವುದೇ ದಾಖಲಾತಿ ಇರುವುದಿಲ್ಲ.

ಮ್ಯಾನೇಜಿಂಗ್ ಟ್ರಸ್ಟಿಯಾಗಿ ಇತರೆ ಧರ್ಮದರ್ಶಿಗಳಿಗೆ ಮೌಖಿಕವಾಗಿ ನಾನು ಜವಾಬ್ದಾರಿಗಳನ್ನು ವಹಿಸಬಹುದು ಎಂದು ನಿಡಿ-1 ರಲ್ಲಿ ಕಾಣಿಸಿರುವುದಿಲ್ಲಾ ಎಂದರೆ ಸರಿ. ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಆರೋಪಿಗೆ ಮೌಖಿಕವಾಗಿ ಅನುಮತಿ ನೀಡಿದ್ದು ಆತ ನೇಮಕ ಮಾಡಿದ ಶಿಕ್ಷಕರ ಬಗ್ಗೆ ತಾಂತ್ರಿಕವಾಗಿ ಅನುಮೋದನೆ ನೀಡುತ್ತಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಯವರಿಗೆ ಸಂಬಳ ಮತ್ತು ಮಿಳಿಂದ ವಿದ್ಯಾ ಸಂಸ್ಥೆಯನ್ನು ನಡೆಸಲು ಬೇಕಾದ ಹಣವನ್ನು ಶಾಲಾ ವಿದ್ಯಾರ್ಥಿಗಳಿಂದ ಬರುತ್ತಿದ್ದಂತಹ ಶುಲ್ಕ ಮತ್ತು ಶಾಲಾ ವಾಹನಗಳ ಶುಲ್ಕ ಮತ್ತು ದಾನಿಗಳು ನೀಡುವ ದೇಣಿಗೆ ಇವುಗಳಿಂದ ಕ್ರೋಢೀಕರಿಸುತ್ತಿದ್ದೆವು. ಸದರಿ ಹಣವನ್ನು ಬ್ಯಾಂಕಿಗೆ ಜಮಾ ಮಾಡುವುದು ಮತ್ತು ಬ್ಯಾಂಕಿನಿಂದ ತೆಗೆದು ಪಾವತಿ ಮಾಡುವ ಕೆಲಸವನ್ನು ನಾನು ನಿರ್ವಹಿಸುತ್ತಿರಲಿಲ್ಲಾ. ಅವುಗಳನ್ನು ಶಿಕ್ಷಕರ ಮೂಲಕವೇ ಮಾಡಿಸುತ್ತಿದ್ದು, ನಾನು ಅದಕ್ಕೆ ಅನುಮತಿ ನೀಡುತ್ತಿದ್ದೆ.

ವಿದ್ಯಾರ್ಥಿಗಳಿಂದ ಪ್ರತಿ ತಿಂಗಳು ಬೋಧನಾ ಶುಲ್ಕವನ್ನು ಪಡೆಯುತ್ತಿದ್ದೆವು. ಬೋಧನಾ ಶುಲ್ಕವನ್ನು ಸಂಸ್ಥೆಯ ತರಗತಿವಾರು ಶಿಕ್ಷಕರು ಪಡೆದುಕೊಳ್ಳುತ್ತಿದ್ದರು. ಅವರುಗಳೆಂದರೆ ಹೇಮಾವತಿ, ಜಲಜಾಕ್ಷಿ, ಗೀತಾ, ಸುಲೋಚನಾ, ಸುರೇಶ್‌ಕುಮಾರ್ ಒಟ್ಟು 18 ಜನ ಶಿಕ್ಷಕರು ಸ್ವೀಕರಿಸುತ್ತಿದ್ದರು. ಸದರಿ ಹಣವನ್ನು ಅವರು ಆರೋಪಿ ಬಳಿ ಕೊಡುತ್ತಿದ್ದರು. ಸಂಸ್ಥೆಗೆ ಯಾವುದೇ ಹಣ ಬಂದಲ್ಲಿ ಅದನ್ನು ಸಂಸ್ಥೆಯ ಹೆಸರಿನಲ್ಲಿ ತೆರೆದಿರುವ ಖಾತೆಗೆ ಜಮಾ ಮಾಡಬೇಕು ಎಂಬ ನಿಯಮವಿದೆ ಎಂದರೆ ಸರಿ. ಆರೋಪಿಯಿಂದ ಪಡೆದು ನಾನು ಯಾವುದೇ ಹಣವನ್ನು ಖಾತೆಗೆ ಜಮಾ ಮಾಡಿರುವುದಿಲ್ಲಾ. ಆರೋಪಿ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಿದ್ದರೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ಶಿಕ್ಷಕರು ಬೋಧನಾ ಶುಲ್ಕದ ಹಣವನ್ನು ಆರೋಪಿ ಕಡೆ ಕೊಡಬೇಕೆಂದು ಸಂಸ್ಥೆಯಲ್ಲಿ ಯಾವುದೇ ಠರಾವು ಆಗಿರುವುದಿಲ್ಲಾ, ಬೋಧನಾ ಶುಲ್ಕ ಹಣವನ್ನು ಆರೋಪಿಗೆ ಶಿಕ್ಷಕರು ಕೊಟ್ಟಿರುವ ಬಗ್ಗೆ ದಾಖಲಾತಿ ಇದೆ. ಆರೋಪಿ ತನ್ನ ಕೈಬರಹದಲ್ಲಿ ಪ್ರತಿ ತಿಂಗಳು ಮತ್ತು ಪ್ರತಿದಿನ ಹಣ ಪಡೆದುಕೊಂಡಿರುವ ಬಗ್ಗೆ ದಾಖಲಾತಿ ಇದೆ. ನಿಖರವಾಗಿ ಇಂತಿಷ್ಟು ಹಣ ಶಿಕ್ಷಕರಿಂದ ಆರೋಪಿಗೆ ಬೋಧನಾ ಶುಲ್ಕದ ರೂಪದಲ್ಲಿ ನೀಡಲಾಗುತ್ತದೆಯೇ ಎಂದರೆ ಸಾಕ್ಷಿಯು ಲೆಕ್ಕ ಪರಿಶೋಧಕರ ವರದಿಯಂತೆ ಎಲ್ಲಾ ಶುಲ್ಕಗಳನ್ನು ಒಳಗೊಂಡು, ಸುಮಾರು *6,81,862/-* ರೂ.ಗಳನ್ನು ಆರೋಪಿ ಪಡೆದುಕೊಂಡಿರುತ್ತಾನೆ ಎಂದು ಇದೆ ಎಂದು ಹೇಳುತ್ತಾರೆ. ಎಲ್ಲಾ ಶುಲ್ಕಗಳು ಎಂದರೆ ಬೋಧನೆ ಶುಲ್ಕ, ವಾಹನದ ಶುಲ್ಕ, ಅಭಿವೃದ್ಧಿ ಶುಲ್ಕ ಒಳಗೊಂಡಿರುತ್ತದೆ. ಆರೋಪಿ ಬೋಧನೆ ಶುಲ್ಕ ಇಂತಿಷ್ಟು , ವಾಹನದ ಶುಲ್ಕ ಇಂತಿಷ್ಟು ಮತ್ತು ಅಭಿವೃದ್ಧಿ ಶುಲ್ಕ ಇಂತಿಷ್ಟು ಎಂದು ಪಡೆದುಕೊಂಡಿರುವುದಾಗಿ ದಾಖಲೆಯನ್ನು ಕೊಟ್ಟಿರುವುದಿಲ್ಲಾ,

*18* ಜನ ಶಿಕ್ಷಕರು ಇಂತಿಷ್ಟು ಹಣವನ್ನು ಆರೋಪಿ ಕೈಗೆ ಕೊಟ್ಟಿರುವ ಬಗ್ಗೆ ದಾಖಲೆ ಇಟ್ಟುಕೊಂಡಿದ್ದಾರಾ ಎಂದರೆ ಸಾಕ್ಷಿಯು ಆರೋಪಿಯೇ ಪ್ರತಿ ಶಿಕ್ಷಕರಿಂದ ಇಂತಿಷ್ಟು ಹಣ ಪಡೆದಿರುವುದಾಗಿ ಸಹಿ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿಯು ಈವರೆಗೂ ಎಂದೂ ಯಾವುದೇ ದೇಣಿಗೆ ಹಣವಾಗಲೀ, ವಾಹನದ ಶುಲ್ಕವಾಗಲೀ ಅಥವಾ ಬೋಧನೆಯ ಶುಲ್ಕವನ್ನಾಗಲೀ ಪಡೆದುಕೊಂಡಿರುವುದಿಲ್ಲಾ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದೇಣಿಗೆ ಹಣ, ವಾಹನದ ಶುಲ್ಕ, ಬೋಧನೆಯ ಶುಲ್ಕ ಇವುಗಳನ್ನು ಪಡೆದುಕೊಳ್ಳಲು ಸಂಸ್ಥೆಯ ಇತರೆ ಧರ್ಮದರ್ಶಿಗಳಿಗೆ ಯಾವುದೇ ಅಧಿಕಾರ ಕೊಟ್ಟಿರುವುದಿಲ್ಲ

ಪ್ರತಿ ತಿಂಗಳ ಧರ್ಮದರ್ಶಿ ಸಭೇಗೆ ದೇಣಿಗೆ ಮತ್ತು ಶುಲ್ಕದ ರೂಪದಲ್ಲಿ ಇಷ್ಟು ಹಣ ಬಂದಿದ್ದು ಅದರಲ್ಲಿ ಇಂತಿಷ್ಟು ವಿಲೇ ಆಗಿದ್ದ ಬಗ್ಗೆ ಚರ್ಚೆಯಾಗುತ್ತಿತ್ತೋ ಇಲ್ಲವೋ ಎಂದರೆ ದೇಣಿಗೆ ಮತ್ತು ಶುಲ್ಕದ ಹಣ ಬಂದ ಬಗ್ಗೆ ಮಾಹಿತಿ ನೀಡದೇ ಇದ್ದಿದ್ದರಿಂದ

ಯಾವುದೇ ಚರ್ಚೆಯಾಗಿರುವುದಿಲ್ಲಾ ಎಂದು ಹೇಳುತ್ತೇನೆ. ವ್ಯವಸ್ಥಾಪಕ ಧರ್ಮದರ್ಶಿಯಾಗಿದ್ದರಿಂದ ಸಂಸ್ಥೆ ಹಣ ಕ್ರೋಢೀಕರಿಸುವ ಬಗ್ಗೆ ಮತ್ತು ಸಂಸ್ಥೆಯ ಹಣ ವ್ಯಯ ಆಗುವ ಬಗ್ಗೆ ನಾನು ಗಮನವಹಿಸುತ್ತಿದ್ದೆ.

ಪ್ರತಿ ತಿಂಗಳು ಸಂಸ್ಥೆಗೆ ದೇಣಿಗೆ ಹಣ ಮತ್ತು ಶುಲ್ಕ ಬರುತ್ತಿದ್ದ ಬಗ್ಗೆ ಹಾಗೂ ವಿಲೇ ಆಗುತ್ತಿದ್ದ ಬಗ್ಗೆ ಗಮನ ವಹಿಸುತ್ತಿದ್ದೆ. ಯಾವುದೇ ಹಣ ದುರುಪಯೋಗ ಆಗಿದ್ದಲ್ಲಿ ಪ್ರತಿ ತಿಂಗಳು ವ್ಯವಸ್ಥಾಪಕ ಧರ್ಮದರ್ಶಿಯಾಗಿ ನನ್ನ ಗಮನಕ್ಕೆ ಬರುತ್ತಿರಲಿಲ್ಲಾ. ಪ್ರತಿತಿಂಗಳು ಶಿಕ್ಷಕರನ್ನು ಕರೆದು, ಶುಲ್ಕ ಪಾವತಿಯಾಗಿರುವ ಬಗ್ಗೆ ನಾನು ವಿಚಾರ ಮಾಡುತ್ತಿರಲಿಲ್ಲ, ಆ ರೀತಿ ವಿಚಾರ ಮಾಡಲು ನನಗೇನೂ ತೊಂದರೆ ಇರಲಿಲ್ಲಾ, ಕಾರಣ ಆರೋಪಿ ಅದನ್ನು ಮಾಡುತ್ತಿದ್ದರಿಂದ, ಆತನ ಮೇಲೆ ನಂಬಿಕೆ ಇಟ್ಟಿದ್ದು ಅದರ ಪ್ರಮೇಯವೇ ಇರಲಿಲ್ಲಾ ಎಂದು ಹೇಳುತ್ತೇನೆ. ಆರೋಪಿಯು ಪ್ರತಿ ತಿಂಗಳು ಎಷ್ಟು ಹಣ ಶೇಖರಣೆಯಾಗಿದೆ, ಎಷ್ಟು ವ್ಯಯ ಆಗಿದೆ ಎಂಬುದರ ಬಗ್ಗೆ ಆತನನ್ನು ಕರೆಸಿ ಮಾಹಿತಿ ಕೇಳುತ್ತಿರಲಿಲ್ಲ, ಸಾಕ್ಷಿ ಮುಂದುವರೆದು ಆತ ಪ್ರತಿ ತಿಂಗಳು ಸರಿಯಾಗಿ ಮಾಹಿತಿ ನೀಡದೇ ಇದ್ದದ್ದಕ್ಕೆ ಮತ್ತು ಲೆಕ್ಕ ತೋರಿಸದೇ ಇದ್ದದ್ದಕ್ಕೆ ಆತನ ವಿರುದ್ಧ ಕ್ರಮ ಜರುಗಿಸಲಾಗಿದೆ ಎಂದು ಹೇಳುತ್ತಾರೆ.

14 ವರ್ಷಗಳಲ್ಲಿ ಪ್ರತಿತಿಂಗಳು ವಂತಿಗೆ ಮತ್ತು ಶುಲ್ಕದ ರೂಪದಲ್ಲಿ ಹಣ ಸಂಗ್ರಹವಾಗಿರುತ್ತದೆ. ಪ್ರತಿತಿಂಗಳ ಧರ್ಮದರ್ಶಿಗಳ ಸಭೆಯಲ್ಲಿ ದೇಣಿಗೆ ಮತ್ತು ಶುಲ್ಕದ ರೂಪದಲ್ಲಿ ಸಂಗ್ರಹವಾಗುತ್ತಿದ್ದ ಹಣದ ಬಗ್ಗೆ ವಿಷಯವನ್ನು ಮಂಡಿಸಿ, ಆರೋಪಿಯಿಂದ ಲೆಕ್ಕ ಪಡೆಯಲು ತೊಂದರೆ ಇರಲಿಲ್ಲಾ, ಕಾರಣ ಆತನ ಮೇಲೆ ನಂಬಿಕೆ ಇತ್ತು ಎಂದು ಹೇಳುತ್ತೇನೆ. ಸರ್ಕಾರಿ ನಿಯಮದ ಪ್ರಕಾರ ಬೋಧಕ ಸಿಬ್ಬಂದಿಯವರಿಗೆ ಸಂಬಳವನ್ನು ಬ್ಯಾಂಕ್ ಖಾತೆಯ ಮೂಲಕವೇ ಬಟವಾಡೆ ಮಾಡಬೇಕು ಎಂದರೆ ಸರಿ. 18 ಜನ ಶಿಕ್ಷಕರಿಗೆ ಸಂಬಳ ಬ್ಯಾಂಕ್ ಖಾತೆಯ ಮೂಲಕ ಪಾವತಿಯಾಗಿದೆಯೇ ಎಂದರೆ ಈಗ ಮಾಡುತ್ತಿದ್ದೇವೆ ಎಂದು ಹೇಳುತ್ತೇನೆ. 2011 ರಿಂದ ಸದರಿ ವ್ಯವಸ್ಥೆ ಜಾರಿ ಮಾಡಿದ್ದೇವೆ

ಎಂದು ಹೇಳುತ್ತೇನೆ. ಬೋಧಕ ಶಿಕ್ಷಕ ಸಿಬ್ಬಂದಿಯವರಿಗೆ ಬ್ಯಾಂಕ್ ಖಾತೆಯ ಮೂಲಕ ಸಂಬಳ ನೀಡಬೇಕು ಎಂದು ಸಭೆಯಲ್ಲಿ ಠರಾವು ಮಾಡಿದ್ದೀರಾ ಎಂದರೆ ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸಬೇಕೆಂದು ಠರಾವು ಮಾಡಿದ್ದೇವೆ ಎಂದು ಹೇಳುತ್ತೇನೆ.

(ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲನ್ನು ಕಾಲಾವಕಾಶಕೋರಿದ್ದರಿಂದ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.